**ದಿವಾಣಿ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಕಲಘಟಗಿ**

**ಸಿ ಸಿ ನಂ. 1770/2022**

**ಚಾ.ಸಾ.** 1

**ಪ್ರಾ.ಸಾ.** 1

**ದಿನಾಂಕಃ 07.08.2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೊಧಿಸಲಾಯಿತು.**

| | |
|---|---|
| ಸಾಕ್ಷಿಯ ಹೆಸರು | ಶಿವಪ್ಪ ಗದಗ |
| ತಂದೆಃ ಗಂಡನ ಹೆಸರು | ಈಶ್ವರಪ್ಪ |
| ಉದ್ಯೋಗ | ಎ ಎಸ್ ಐ |
| ವಯಸ್ಸು | 57 |
| ವಾಸಸ್ಥಳ | ನವಲಗುಂದ |

**ಪ್ರಾರಂಭ ಸಮಯಃ 12.30 ಪಿ. ಎಂ.**

**ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ಯವರಿಂದ**

ನಾನು 2019 ರಿಂದ 2022 ರವರೆಗೆ ಕಲಘಟಗಿ ಪೊಲೀಸ್ ಠಾಣೆಯಲ್ಲಿ ಎ ಎಸ್ ಐ ಆಗಿ ಕರ್ತವ್ಯ ನಿರ್ವಹಿಸಿದ್ದೆ.

ಸಾಕ್ಷಿಗೆ ದಿಃ15.04.2022 ರ ದೂರು ಮತ್ತು ಪಂಚನಾಮೆಯನ್ನು ತೋರಿಸಲಾಗಿ ಅವುಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ನಿಪಿ1 ಮತ್ತು 2 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಗಳನ್ನು ನಿಪಿ1(ಎ) ಮತ್ತು ನಿಪಿ2(ಎ) ಎಂದು ಗುರುತಿಸಲಾಯಿತು. ಸಾಕ್ಷಿಗೆ ಮಾದರಿ ಶೀಲು ಮತ್ತು ಸಹಿಗಳನ್ನು ತೋರಿಸಲಾಗಿ ಅವುಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ನಿಪಿ3 ರಿಂದ 8 ಎಂದು ಗುರುತಿಸಲಾಯಿತು.

ದಿಃ15.04.2022 ರಂದು ಸಂಜೆ 07.00 ಗಂಟೆ ಸಮಯದಲ್ಲಿ ನಾನು ಮತ್ತು ಚಾಸಾ.4 ಮತ್ತು 5 ರವರು ಕಲಘಟಗಿ ಪಟ್ಟಣದ ಹಳಿಯಾಳ ಕ್ರಾಸ ಬಳಿ ರಸ್ತೆ ಗಸ್ತು ಮಾಡುತ್ತಿದ್ದಾಗ, ಸುಮಾರು 07.10 ಗಂಟೆ ಸಮಯಕ್ಕೆ ಶಿವನಪುರ ಗ್ರಾಮದ ಬಸ್ ನಿಲ್ದಾಣದ ಸಾರ್ವಜನಿಕ ಸ್ಥಳದಲ್ಲಿ ಒಬ್ಬ ಅಸಾಮಿ ಒಂದು ಚೀಲದಲ್ಲಿ ಮದ್ಯವನ್ನು ಇಟ್ಟುಕೊಂಡು ಮಾರಾಟ ಮಾಡುತ್ತಿದ್ದಾನೆಂದು ಬಾತ್ಮಿ ಬಂದ ಮೇರೆಗೆ ಸದರಿ ವಿಚಾರವನ್ನು ನನ್ನ ಮೇಲಾಧಿಕಾರಿಗಳಿಗೆ ತಿಳಿಸಿ, ಬೆಲವಂತ ಗ್ರಾಮದ ರಸ್ತೆಯ ಮದ್ಯೆ ಚಾಸಾ.2 ಮತ್ತು 3 ರವರನ್ನು ಪಂಚರಾಗಿ ಸಹಕರಿಸುವಂತೆ ಕೋರಿ ಅವರು ಒಪ್ಪಿಕೊಂಡ ಮೇರೆಗೆ ಅವರನ್ನು ಸಹ ನಮ್ಮ ಜೊತೆ ಕರೆದುಕೊಂಡು ಘಟನಾ ಸ್ಥಳಕ್ಕೆ 07.40 ಕ್ಕೆ ಹೋದೆವು. ಘಟನಾ ಸ್ಥಳದ ಸ್ವಲ್ಪ ದೂರದಲ್ಲಿ ನಿಂತು ನಾವು ವಾಚ್ ಮಾಡಿದೆವು. ಒಬ್ಬ ವ್ಯಕ್ತಿಯು ಸಾರ್ವಜನಿಕರಿಗೆ ಮದ್ಯವನ್ನು ಮಾರಾಟ ಮಾಡುತ್ತಿರುವುದು ಹಾಗೂ 3-4 ಜನ ನಿಂತಿರುವುದು ನಮಗೆ ಕಂಡು ಬಂದಿತು. ಆದ್ದರಿಂದ ನಾವು ಪಂಚರ ಸಮಕ್ಷಮ ಸದರಿ ಅಸಾಮಿಯ ಮೇಲೆ ದಾಳಿ ಮಾಡಿದೆವು.

ದಾಳಿ ಕಾಲಕ್ಕೆ ಮದ್ಯವನ್ನು ಮಾರಾಟ ಮಾಡುತ್ತಿದ್ದಂತಹ ವ್ಯಕ್ತಿಯು ಓಡಿ ಹೋದನು. ಮದ್ಯವನ್ನು ಖರೀದಿ ಮಾಡಲು ನಿಂತಿದ್ದಂತಹ ಸಾರ್ವಜನಿಕರು ಸಹ ಓಡಿ ಹೋದರು. ಮದ್ಯವನ್ನು ಮಾರಾಟ ಮಾಡುತ್ತಿದ್ದಂತಹ ವ್ಯಕ್ತಿಯು ಚಾಸಾ.2 ಮತ್ತು 3 ರವರಿಗೆ ಪರಿಚಯವಿದ್ದ ಕಾರಣ ಸದರಿಯವರು ಆತನ ಹೆಸರು ರಾಮಣ್ಣ ಮೇತ್ರಿ ಎಂದು ಹೇಳಿದರು.

ಪಂಚರ ಸಮಕ್ಷಮ ಸ್ಥಳವನ್ನು ಪರಿಶೀಲಿಸಲಾಗಿ ಅಲ್ಲಿ ಒಂದು ಚೀಲವಿದ್ದು, ಸದರಿ ಚೀಲವನ್ನು ತೆರೆದು ನೋಡಲಾಗಿ ಅದರಲ್ಲಿ 90 ಎಮ್ ಎಲ್ ನ 45 ಓ ಸಿ ವಿಸ್ಕಿ ಟೆಟ್ರಾ ಪ್ಯಾಕೇಟಗಳು ಇರುವುದು ಕಂಡುಬಂದಿತು. ಸದರಿ ಮಾಲೀಗೆ ಬ್ಯಾಚು ಮತ್ತು ಲೇಬಲ್ ಇರಲಿಲ್ಲ. ಸದರಿ ಮದ್ಯವನ್ನು ಪಂಚರ ಸಮಕ್ಷಮ ನಿಪಿ2 ರಂತೆ ಅಮಾನತುಪಡಿಸಿಕೊಂಡೆವು. ನಿಪಿ2 ನ್ನು ಬೀದಿ ದೀಪ ಮತ್ತು ನಮ್ಮ ಜೀಪಿನ ಹೆಡ್ ಲೈಟನ ಬೆಳಕಿನಿಂದ ರಾತ್ರಿ 08.00 ರಿಂದ 09.00 ಗಂಟೆಯವರೆಗೆ ಜರುಗಿಸಿರುತ್ತೇವೆ. ನಂತರ ಮಾಲು ಮತ್ತು ಪಂಚನಾಮೆಯೊಂದಿಗೆ ಪೊಲೀಸ್ ಠಾಣೆಗೆ ಬಂದು ಚಾಸಾ.8 ರವರಿಗೆ ನಿಪಿ1 ರಂತೆ ದೂರು ದಾಖಲು ಮಾಡಿರುತ್ತೇನೆ.

ಸಾಕ್ಷಿಯು ನ್ಯಾಯಾಲಯದ ಮುಂದಿರುವ ಮುದ್ದೆ ಮಾಲನ್ನು ನೋಡಿ ಗುರುತಿಸಿದ್ದು ಅದನ್ನು ಮು ಮಾ 1 ಎಂದು ಗುರುತಿಸಲಾಯಿತು. ಅಪಾದಿತನ ಗುರುತು ಮತ್ತು ಚಹರೆಗೆ ಸಂಬಂಧಿಸಿದಂತೆ ನಾನು ಹೇಳಿಕೆಯನ್ನು ಕೊಟ್ಟಿರುತ್ತೇನೆ. ಸಾಕ್ಷಿ ನ್ಯಾಯಾಲಯದ ಮುಂದಿರುವ ಅಪಾದಿತನನ್ನು ನೋಡಿ ಗುರುತಿಸಿದರು.

**ಪಾಟೀ ಸವಾಲುಃ ಅಪಾದಿತನ ಪರ ಶ್ರೀ ಕೆ ಬಿ ಜಿ ವಕೀಲರಿಂದ**

ಶಿವನಪುರ ಗ್ರಾಮದಲ್ಲಿ ಎರಡು ಬಸ್ ನಿಲ್ದಾಣಗಳಿವೆ ಅಂದರೆ ಸರಿಯಲ್ಲ. ಬಸ್ ನಿಲ್ದಾಣದಿಂದ ಸುಮಾರು ಅರ್ದ ಕಿ ಮೀ ಅಂತರದಲ್ಲಿ ಗ್ರಾಮವಿದೆ ಅಂದರೆ ಸರಿಯಲ್ಲ. ಬಸ್ ನಿಲ್ದಾಣದ ಎದುರುಗಡೆ ಜನತಾ ಮನೆಗಳು ಇವೆ ಅಂದರೆ ಸಾಕ್ಷಿಯು ಸ್ವಲ್ಪ ದೂರದಲ್ಲಿವೆ ಎಂದು ನುಡಿಯುತ್ತಾರೆ. ನಿಪಿ1 ರಲ್ಲಿ ಘಟನೆ ಆದ ದಿನಾಂಕ ತಪ್ಪಾಗಿ ನಮೂದಾಗಿದೆ ಅಂದರೆ ಸರಿ. ಅಪಾದಿತನಿಂದ ಯಾವುದೇ ಮದ್ಯವನ್ನು ವಶಪಡಿಸಿಕೊಂಡಿಲ್ಲ ಅಂದರೆ ಸರಿಯಲ್ಲ. ನಿಪಿ2 ನ್ನು ಘಟನಾ ಸ್ಥಳದಲ್ಲಿ ಬರೆದಿಲ್ಲ ಅಂದರೆ ಸರಿಯಲ್ಲ. ಪಂಚರ ಸಮಕ್ಷಮ ಪಂಚನಾಮೆ ಮಾಡಿಲ್ಲ ಅಂದರೆ ಸರಿಯಲ್ಲ. ನಿಪಿ2 ನ್ನು ಪೊಲೀಸ್ ಠಾಣೆಯಲ್ಲಿ ಬರೆಯಲಾಗಿದೆ ಅಂದರೆ ಸರಿಯಲ್ಲ. ಅಪಾದಿತನಿಗೂ ಮತ್ತು ಮು ಮಾ1 ಕ್ಕೂ ಯಾವೂದೇ ಸಂಬಂಧವಿಲ್ಲ ಅಂದರೆ ಸರಿಯಲ್ಲ. ಅಂಕಿ ಸಂಖ್ಯೆಗಾಗಿ ಅಪಾದಿತನ ವಿರುದ್ದ ಸುಳ್ಳು ಪ್ರಕರಣವನ್ನು ದಾಖಲು ಮಾಡಿದ್ದೇನೆ ಅಂದರೆ ಸರಿಯಲ್ಲ. ಪ್ರಕರಣಕ್ಕೆ ಅನುಕೂಲವಾಗಲು ಸುಳ್ಳು ದಾಖಲೆಗಳನ್ನು ಸೃಷ್ಟಿ ಮಾಡಿದ್ದೇವೆ ಅಂದರೆ ಸರಿಯಲ್ಲ. ಠಾಣೆಯಲ್ಲಿ ದಾಖಲೆಗಳನ್ನು ಸೃಷ್ಟಿ ಮಾಡಿದ್ದೇವೆ ಅಂದರೆ ಸರಿಯಲ್ಲ. ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

**ಓ ಹೇ ಕೆ ಸರಿ ಇದೆ,**

**ದಿವಾಣಿ ನ್ಯಾಯಾಧೀಶರು ಹಾಗೂ**

**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಕಲಘಟಗಿ.**